# ಜಲವಿವಾದ

ಜಲವಿವಾದ ಇಂದು ನಿನ್ನೆಯದಲ್ಲ. ಪ್ರಾಯಶಃ ಭೂಮಿಯ ಹುಟ್ಟಿನೊಂದಿಗೇ ಅದು ಬೆಸೆದುಕೊಂಡಿರಬೇಕು. ಪ್ರಾಚೀನವೂ, ಪ್ರಸಿದ್ಧವೂ ಆದ ಉದಾಹರಣೆಯೊಂದಿದೆ. ಸಿದ್ಧಾರ್ಥ ಗೌತಮ ಬುದ್ಧನಾದದ್ದು ಈ ನದಿ ನೀರಿನ ವಿವಾದದಿಂದಲೇ ಎಂಬುದನ್ನು ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಸಂಶೋಧನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಸಾಕ್ಯ ಮತ್ತು ಕೋಲಿಯ ರಾಜ್ಯಗಳ ನಡುವೆ ರೋಹಿಣಿ ನದಿ ಹರಿಯುತ್ತಿತ್ತು. ಈ ಎರಡು ರಾಜ್ಯಗಳ ಜನರಿಗೂ ಆ ನದಿಯ ಮೇಲಿನ ಹಕ್ಕಿನಿಂದಾಗಿ ವ್ಯಾಜ್ಯವು ನಿರಂತರವಾಗಿತ್ತು. ಒಮ್ಮೆ ಅದು ವಿಕೋಪಕ್ಕೆ ಹೋಗಿ ಸಾಕ್ಯರು ಕೋಲಿಯರ ಮೇಲೆ ಯುದ್ಧ ಮಾಡುವ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಘದ ಅನುಮತಿ ಬೇಕು. ಸಾಕ್ಯರ ಸಂಘ ಸಭೆ ಸೇರುತ್ತದೆ. ಎಲ್ಲರಿಗೂ ಯುದ್ಧ ಮಾಡುವ ತವಕ. ಈ ಬಾರಿ ಕೋಲಿಯರನ್ನು ಮಣಿಸಲೇಬೇಕೆಂಬುದು ಸಾಕ್ಯರ ಛಲ. ರಾಜಕುಮಾರ ಸಿದ್ಧಾರ್ಥ ಗೌತಮನ ಆಗಮನವಾಗುತ್ತದೆ. ಎಲ್ಲರೂ ಯುವರಾಜನ ಬೆಂಬಲವನ್ನು ನಿರೀಕ್ಷಿಸುತ್ತಾ ಯುದ್ಧದ ಪರ ಕೈ ಎತ್ತುತ್ತಾರೆ. ಆದರೆ ಸಿದ್ಧಾರ್ಥ ಯುದ್ಧ ಬೇಡವೆಂದು ವಿರೋಧ ವ್ಯಕ್ತಪಡಿಸುತ್ತಾನೆ. ಆಗ ಸಿದ್ಧಾರ್ಥ ಹೇಳುವ ಮಾತು ಅರ್ಥಪೂರ್ಣವಾಗಿದೆ.

ಕೋಲಿಯರು ಕೆಲವು ತಪ್ಪುಗಳನ್ನೆಸಗಿದ್ದಾರೆ. ಸಾಕ್ಯರ ಕಡೆಯಲ್ಲಿಯೂ ಒಂದೆರಡು ತಪ್ಪುಗಳಾಗಿವೆ. ಅದಕ್ಕೆ ಯುದ್ಧ ಪರಿಹಾರ ನೀಡುವುದಿಲ್ಲ. ಸಾಕ್ಯರಿಂದ ಇಬ್ಬರು ಪ್ರತಿನಿಧಿಗಳನ್ನು ಆರಿಸಿ, ಕೋಲಿಯರ ಕಡೆಯಿಂದಲೂ ಇಬ್ಬರು ಪ್ರತಿನಿಧಿಗಳು ಬರಲಿ. ಮೂರನೆಯ ಇನ್ನೊಂದು ರಾಜ್ಯದಿಂದ ಒಬ್ಬ ಪ್ರತಿನಿಧಿ ಇರಲಿ. ಈ ಐವರು ಕೂಡಿ ನ್ಯಾಯ ತೀರ್ಪು ನೀಡಲಿ ಎಂದು ಸಿದ್ಧಾರ್ಥ ಸಲಹೆ ನೀಡುತ್ತಾನೆ. ಇದನ್ನು ಒಪ್ಪದ ಸಾಕ್ಯರು ಸಿದ್ಧಾರ್ಥನನ್ನು ಸಂಘದಿಂದ ಅಷ್ಟೇ ಅಲ್ಲ ರಾಜ್ಯದಿಂದಲೇ ಉಚ್ಚಾಟಿಸುತ್ತಾರೆ. ಮುಂದೆ ಆತ ಗೌತಮ ಬುದ್ಧನಾದ್ದು ಇತಿಹಾಸ.

ಎರಡು ಪಕ್ಷಗಳ ತಿಕ್ಕಾಟದಲ್ಲಿ ಪಕ್ಷೇತರನಾದ ಮೂರನೆಯ ವ್ಯಕ್ತಿಯ ಅವಶ್ಯಕತೆ ಎಷ್ಟು ಮುಖ್ಯ ಎಂಬುದನ್ನು ಈ ಕಥೆ ಒತ್ತಿ ಹೇಳುತ್ತದೆ. ಬೆಂಗಾಲ್ ಮತ್ತು ಬಿಹಾರ ರಾಜ್ಯಗಳ ನಡುವೆ ಇದ್ದ ದಾಮೋದರ್ ಕಣಿವೆ ಯೋಜನೆಯ ಬಿಕ್ಕಟ್ಟನ್ನು ಅಂಬೇಡ್ಕರ್ ಹೀಗೆಯೆ ಬಗೆಹರಿಸುತ್ತಾರೆ. ರೈಲುಮಾರ್ಗದಂತೆಯೆ ನದಿ ಮಾರ್ಗವು ಕೇಂದ್ರದ ಯಾದಿಯಲ್ಲಿರಬೇಕೆಂಬುದು ಅವರ ನಿಲುವಾಗಿತ್ತು. ದಾಮೋದರ್ ಕಣಿವೆ ನಿಗಮವನ್ನು ಸ್ಥಾಪಿಸುವುದರ ಮೂಲಕ ಮತ್ತು ಅದರ ಆಡಳಿತವನ್ನು ಕೇಂದ್ರದ ಮತ್ತು ಆ ಎರಡೂ ರಾಜ್ಯಗಳ ತಜ್ಞರು ನೋಡಿಕೊಳ್ಳುವುದರ ಮೂಲಕ ಯೋಜನೆ ತನ್ನ ವಿವಿಧೋದ್ದೇಶ ಗುರಿಗಳನ್ನು ಸಾಧಿಸುವಲ್ಲಿ ಸಫಲವಾಗುವಂತೆ ನೋಡಿಕೊಳ್ಳುತ್ತಾರೆ. ಇದೇ ಮಾದರಿಯನ್ನು ಮಹಾನದಿ ಯೋಜನೆಗೂ ಅಳವಡಿಸಿಕೊಂಡು ದೇಶದಲ್ಲಿಯೆ ಬೃಹತ್ತಾದ ಹಿರಾಕುಡ್ ಅಣೆಕಟ್ಟು ನಿರ್ಮಾಣವಾಗುತ್ತದೆ.

ನೀರು, ಗಾಳಿಯಷ್ಟು ಸಮೃದ್ಧವೂ ಅಲ್ಲ, ಬೆಳಕಿನಷ್ಟು ಪರಿಶುದ್ಧವೂ ಅಲ್ಲ. ಆದರೆ ಮನುಷ್ಯನಿಗೆ ಅದು ಗಾಳಿ, ಬೆಳಕಿನಷ್ಟೆ ಅಗತ್ಯವಾಗಿದೆ. ಆದ್ದರಿಂದಲೇ ನೀರನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ. ನೆಲವೊಂದೆ: ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ: ಶೌಚಮನಕ್ಕೆ, ಕುಲವೊಂದೆ ತನ್ನ ತಾನರಿದವಂಗೆ, ಎಂಬ ಬಸವಣ್ಣನವರ ಅರ್ಥಗರ್ಭಿತ ಮಾತನ್ನು ನಾವು ಅರ್ಥಮಾಡಿಕೊಳ್ಳಲು ಸೋತಿದ್ದೇವೆ. ಪಂಚಭೂತಗಳಲ್ಲಿ ಭೂಮಿ ಮತ್ತು ನೀರು ಮನುಷ್ಯನ ಕೈಗೆ, ಸ್ಪರ್ಶಕ್ಕೆ ಸಿಕ್ಕುವ ವಸ್ತುಗಳಾದ್ದರಿಂದ ಅವುಗಳ ಸದ್ಬಳಕೆ ಮತ್ತು ದುರ್ಬಳಕೆ ಎರಡೂ ಆಗುತ್ತಿದೆ. ಭೂಮಿ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಯಜಮಾನಿಕೆಯ ಸಂಕೇತವಾಗಿಯೂ ನೀರು ಪುರೋಹಿತಶಾಹಿಗೆ ಮಡಿಮೈಲಿಗೆಯ ಸಂಕೇತವಾಗಿಯೂ ದುರ್ಬಳಕೆಯಾಗುತ್ತಿದೆ. ಇವೆರಡರ ಸದ್ಬಳಕೆಯನ್ನು ಸಮಾನತೆಯ ಸಂಕೇತವಾಗಿ ನೋಡಬೇಕಾದ ಕಾಲ ಈಗ ಕೂಡಿ ಬಂದಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಅಭಿಪ್ರಾಯವೇ ಅಂತಿಮವಾಗಿರಬೇಕು. ಕೆಲವು ಚಿಕ್ಕಪುಟ್ಟ ದೇಶಗಳು ಮಹತ್ವದ ವಿಷಯಗಳಲ್ಲೂ ಜನಾಭಿಪ್ರಾಯಕ್ಕೆ ಮೊರೆ ಹೋಗುವುದನ್ನು ಇತ್ತೀಚಿನ ದಿನಗಳಲ್ಲಿ ನೋಡಿದ್ದೇವೆ. ಶಾಸಕಾಂಗ ಅಥವಾ ಸಂಸತ್ತುಗಳಿಗೆ ತಮ್ಮ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಅಧಿಕಾರವಿದ್ದರೂ ಅಂದಂದಿನ ಜನಮತ ಹೇಗಿರಬಹುದೆಂಬ ಕುತೂಹಲವೆ ಇದಕ್ಕೆ ಕಾರಣ. ಅದನ್ನು ಗೌರವಿಸುವ ಜನಪ್ರತಿನಿಧಿಗಳು ನಿಜಕ್ಕೂ ಅಭಿನಂದನಾರ್ಹರು. ವಿಪರ್ಯಾಸವೆಂದರೆ ನಮ್ಮ ದೇಶದಲ್ಲಿ ದುರ್ಬಲ ರಾಜಕಾರಣಿಗಳ ಕಾರಣದಿಂದಲೋ ಏನೋ ನ್ಯಾಯಾಂಗ ಹೆಚ್ಚು ಕ್ರಿಯಾಶೀಲವಾಗಿದೆ ಮತ್ತು ಅಧಿಕಾರಯುತವಾಗಿ ಕಾಣಿಸಿಕೊಳ್ಳುತ್ತಿದೆ. ಆದರೂ ನ್ಯಾಯಾಂಗಕ್ಕೆ ಒಂದು ಮಿತಿ ಇದೆ. ಅದು ಅವಲಂಬಿಸಿಕೊಳ್ಳುವುದು ಲಭ್ಯವಿರುವ ಮಾಹಿತಿಗಳನ್ನು ಮಾತ್ರ. ಒಂದಷ್ಟು ಗಣಿತದ ಲೆಕ್ಕಾಚಾರಕ್ಕೆ ತಮ್ಮ ಅಭಿಪ್ರಾಯವನ್ನು ಸೇರಿಸಿದರೆ ತೀರ್ಪು ಸಿದ್ಧವಾಗುತ್ತದೆ. ಆದರೆ ವಾಸ್ತವ ಸಂಗತಿಗಳು ಬೇರೆಯೆ ಇರುತ್ತವೆ. ಕಾವೇರಿ ಕಣಿವೆಯಲ್ಲಿ ಸಾಕಷ್ಟು ನೀರು ಹರಿದಿದೆ. ನೀರಿನ ಸಮರ್ಪಕ ಬಳಕೆಗೆ ರಾಷ್ಟ್ರೀಯ ಜಲನೀತಿಯನ್ನು ರೂಪಿಸುವುದೊಂದೇ ಉಳಿದಿರುವ ಮಾರ್ಗವೆಂದು ಕಾಣುತ್ತದೆ.

■ ಮೂಚಿ

## ಮಾತೇ ಮುತ್ತು

★ ಇತಿಹಾಸ ಗೊತ್ತಿಲ್ಲದವರು ಮತ್ತೆ ಇತಿಹಾಸವನ್ನು ಪುನರಾವರ್ತಿಸುತ್ತಾರೆ.

ಎಡ್ಮಂಡ್ ಬರ್ಕೆ

★ ನೀವು ತಡ ಆಗಬಹುದು, ಆದರೆ ಸಮಯ ತಡವಾಗುವುದಿಲ್ಲ.

ಬೆಂಜಮಿನ್ ಫ್ರಾಂಕ್ಲಿನ್

★ ಇತರರನ್ನು ತಿಳಿದುಕೊಳ್ಳುವುದು ಬುದ್ಧಿವಂತಿಕೆ. ನಿಮ್ಮನ್ನು ನೀವು ತಿಳಿದುಕೊಳ್ಳುವುದು ಜ್ಞಾನೋದಯ.

ಲಾವೋ ತ್ಸೆ

★ ನೀವು ಪ್ರಾಮಾಣಿಕ ಮತ್ತು ಪಾರದರ್ಶಕವಾಗಿದ್ದರೆ ಜನ ನಿಮ್ಮನ್ನು ನಂಬುತ್ತಾರೆ. ಜನ ನಿಮ್ಮನ್ನು ನಂಬಿದರೆ ನೀವು ಭಯ, ಅನುಮಾನ ಅಥವಾ ಅಸೂಯೆ ಪಡುವ ಅಗತ್ಯವಿಲ್ಲ.

—ದಲೈ ಲಾಮಾ

★ ಅವರು ನಮ್ಮನ್ನು ಹೂಳಲು ಯತ್ನಿಸಿದರು. ನಾವು ಬೀಜ ಎನ್ನುವುದು ಅವರಿಗೆ ಗೊತ್ತಿಲ್ಲ.

ಮೆಕ್ಸಿಕನ್ ಗಾದೆ

★ ಧೈರ್ಯ ಅಂದರೆ ಭಯದ ಗೈರುಹಾಜರಿ ಅಲ್ಲ; ಭಯದ ಮೇಲಿನ ವಿಜಯ.

—ನೆಲ್ಸನ್ ಮಂಡೇಲ

★ ಅಧಿಕಾರ ಎನ್ನುವುದು ಹೆಣ್ಣಿನಂತೆ. ಜನರಿಗೆ ನೀವು ಹೀಗೇ ಎಂದು ವಿವರಿಸಬೇಕಾಗುತ್ತದೆ, ಆದರೆ ವಿವರಿಸಲು ಆಗುವುದಿಲ್ಲ.

—ಮಾರ್ಗರೆಟ್ ಥ್ಯಾಚರ್

★ ನಿಜವಾದ ಪ್ರೀತಿಯನ್ನು ಇಲ್ಲದ ಕಡೆ ಹುಡುಕಲಾಗುವುದಿಲ್ಲ, ಇದ್ದ ಕಡೆ ನಿರಾಕರಿಸಲೂ ಆಗುವುದಿಲ್ಲ.

—ತರ್ಕಾಟೊ ತಸ್ಸೊ

★ ಇತರರು 'ಏನಿದು, ಏಕೆ' ಎಂದು ಪ್ರಶ್ನಿಸುತ್ತಾರೆ. ನಾನು 'ಏನಾಗಬಹುದು ಮತ್ತು ಏಕೆ ಸಾಧ್ಯವಿಲ್ಲ' ಎಂದು ಪ್ರಶ್ನಿಸುತ್ತೇನೆ.

—ಪಾಬ್ಲೊ ಪಿಕಾಸೊ

★ ನನ್ನ ಹೆಂಡತಿ ಜತೆ ನಾನು ಮಾತನಾಡದೆ ಬಹಳ ಕಾಲವಾಯಿತು. ಆಕೆಯ ಮಾತಿಗೆ ತಡೆಯೊಡ್ಡಲು ನಾನು ಬಯಸುವುದಿಲ್ಲ!

—ರೋಡ್ನಿ ಡ್ಯಾಂಗರ್‌ಫೀಲ್ಡ್

★ ನಿಮ್ಮ ಗುರಿಯಿಂದ ದೃಷ್ಟಿ ಬೇರೆಡೆ ಹರಿಸಿದಾಗ ಮಾತ್ರ ನಿಮಗೆ ಕಷ್ಟಗಳು ಕಾಣಿಸುತ್ತವೆ.

—ಹೆನ್ರಿ ಫೋರ್ಡ್

★ ನಿಮಗೆ ಯಾವತ್ತೂ ಭಯ, ಮುಜುಗರ ಅಥವಾ ಗಾಯ ಆಗಿಲ್ಲ ಎಂದಾದರೆ, ನೀವು ಯಾವತ್ತೂ ಯಾವ ಪ್ರಯತ್ನವನ್ನೂ ಮಾಡಿಲ್ಲ ಎಂದರ್ಥ.

—ಜೂಲಿಯಾ ಸೊರೆಲ್